## ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಸಂಡೂರು.

**OS. No. 96/ 2019** **D.W. 01**

ದಿನಾಂಕ **16-02-2023** ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ಶ್ರೀ ಎನ್ ಎ ವಾಯ್ಯ ವಕೀಲರಿಂದ**

* * * *

ನಾನು ಸುಮಾರು 40 ವರ್ಷಗಳಿಂದ ಕೂರೆಕುಪ್ಪ ಗ್ರಾಮದಲ್ಲಿ ವಾಸವಾಗಿದ್ದೇನೆ. ಕೂರೆಕ್ಕುಪ ಗ್ರಾಮದಲ್ಲಿ ಇರುವ ಆಸ್ತಿಗಳು ಮತ್ತು ನಮ್ಮ ಮನೆಯ ಅಕ್ಕ ಪಕ್ಕದಲ್ಲಿ ಇರುವ ಆಸ್ತಿಗಳು ನನಗೆ ಗೊತ್ತಿರುತ್ತದೆ. ನಮ್ಮ ಮನೆಯ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಹೊನ್ನುರಪ್ಪ ಅವರ ಮನೆ, ಉತ್ತರಕ್ಕೆ ರೇವತಿ ಮತ್ತು ಶಿವರಂಗಪ್ಪ ಅವರ ಮನೆ ಮತ್ತು ದಕ್ಷಿಣಕ್ಕೆ ಸರ್ಮಮಂಗಳಾ ಅವರ ಮನೆ ಇರುತ್ತದೆ. ನಮ್ಮ ಮನೆಯ ಉತ್ತರಕ್ಕೆ ಇರುವ ರೇವತಿ ಅವರ ಗಂಡನ ಹೆಸರು ನಾಗರಾಜ ಇರಬಹುದು. ಈ ದಾವೆಯನ್ನು ಹೂಡಿರುವ 1 ನೇ ವಾದಿ ರೇವತಿ ಅವರ ಗಂಡ. ದಾವಾ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಶಿವಲಿಂಗಪ್ಪ ಅವರ ಮನೆ, ಉತ್ತರಕ್ಕೆ ತೀಮಣ್ಣ ಅವರ ಮನೆ ಮತ್ತು ದಕ್ಷಿಣಕ್ಕೆ ನಮ್ಮ ಮನೆ ಅಂದರೆ ಹನುಮಕ್ಕ ಅವರ ಮನೆ ಇರುತ್ತದೆ. ಸದರಿ ಚೆಕ್ ಬಂದಿಯ ಮದ್ಯದಲ್ಲಿ ಇರುವ ಆಸ್ತಿಗೆ ವಾದಿ ಮತ್ತು ರೇವತಿ ಮಾಲೀಕರು ಎಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ಹೇಳಿರುತ್ತಾರೆ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ವಿಸ್ತೀರ್ಣವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಡಿ 6 ರಲ್ಲಿ ವಿಸ್ತೀರ್ಣವನ್ನು ನಮೂದು ಮಾಡಲಾಗಿದೆ. ನಿಡಿ 6 ನ್ನು ಈ ಪ್ರಕರಣದಲ್ಲಿ ನಮಗೆ ನೋಟಿಸ ಬಂದ ಮೇಲೆ ತಯಾರಿಸಿದ ದಾಖಲೆ ಎಂದರೆ ಸರಿಯಲ್ಲ. ನಮ್ಮ ಹಳೆ ಮನೆಗೆ ಯಾವುದೆ ದಾಖಲೆಗಳು ಇರುವುದಿಲ್ಲ. ನಿಡಿ 1 ರಿಂದ 6 ರ ದಾಖಲೆಗಳನ್ನು ಹೊರತುಪಡೆಸಿ ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ನನ್ನ ಬಳಿ ಯಾವುದೆ ದಾಖಲೆಗಳು ಇರುವುದಿಲ್ಲ. ನಿಡಿ 1 ಯಾವ ವರ್ಷ ತೆಗೆದುಕೊಂಡಿರುತ್ತೇನೆ ಎಂದು ನನಗೆ ಹೇಳಲಾಗುವುದಿಲ್ಲ. ನಿಡಿ 3 ರ ಜೊತೆಗೆ ಸ್ವ ನಿರ್ಧರಣಾ ತೆರಿಗೆ ಪಟ್ಟಿ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಮೋದಲು ರಶೀದಿಯನ್ನು ಮಾತ್ರ ಕೊಡುತ್ತಿದ್ದರು ಎಂದು ಹೇಳಿರುತ್ತಾರೆ. ಸ್ವನಿರ್ಧರಣಾ ತೆರಿಗೆ ಪಟ್ಟಿಯನ್ನು ಹಾಜರುಪಡಿಸಿದರೆ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಮತ್ತು ನಮಗೆ ಯಾವುದೆ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು 1ನೇ ವಾದಿಯ ತಂದೆ 1958 ರಲ್ಲಿ ಖರೀದಿ ಮಾಡಿದ ಸ್ವತ್ತು ಎಂದರೆ ಸರಿಯಲ್ಲ. ಸದರಿ ಖರೀದಿಯ ದಿನದಿಂದ ಇಲ್ಲಿಯವರೆಗೆ ವಾದಿಯವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ರೇವತಿ ಮನೆಯ ಪೂರ್ವಕ್ಕೆ ಅಂಗಳ ಇರುವುದಿಲ್ಲ ರಸ್ತೆ ಇರುವುದಾಗಿ ಹೇಳಿರುತ್ತಾರೆ. ಸದರಿ ರೇವತಿಯವರ ಮನೆಯ ಹಿಂದಿನ ಗೊಡೆಯ ನಂತರ ನಮ್ಮ ಮನೆ ಇರುತ್ತದೆ ಎಂದರೆ ಸರಿಯಲ್ಲ. ನಿಡಿ 1 ರಲ್ಲಿರುವ ಫೋಟೊದಲ್ಲಿ ಕಾಣಿಸಿರುವ ಗೊಡೆ ರೇವತಿಯವರ ಮನೆಯ ಗೊಡೆಯಾಗಿರುತ್ತದೆ. ನಿಡಿ 1 ರಲ್ಲಿ ಕಾಣಿಸಿದ ಕಬಿಣ್ಣದ ರಾಡಿನ ಮುಂದೆ ರಸ್ತೆ ಇರುತ್ತದೆ. ಸದರಿ ರಸ್ತೆಯಲ್ಲಿ ಸಾರ್ವಜನಿಕರು ಓಡಾಡುತ್ತಾರೆ. ನಿಡಿ 1ರಲ್ಲಿರುವ ಕಾಣಿಸಿದ ಗೊಡೆಯ ಪಕ್ಕದಲ್ಲಿ ಖಾಲಿ ಜಾಗ ಇರುತ್ತದೆ ಆದರೆ ಅದು ನಮ್ಮ ಜಾಗವಾಗಿರುತ್ತದೆ. ವಾದಿಯವರ ಮನೆಯ ಪಕ್ಕದಲ್ಲಿರುವ ಖಾಲಿ ಜಾಗವನ್ನು ಬಳಿಸಿಕೊಂಡು ಮೆಟ್ಟಿಲುಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ತಮ್ಮ ಜಾಗ ಎಂದು ಹೇಳಿರುತ್ತಾರೆ. ಸದರಿ ಮೆಟ್ಟಿಲುಗಳ ವಿಸ್ತೀರ್ಣ ನನಗೆ ಹೇಳಲಾಗುವುದಿಲ್ಲ. ನಿಡಿ 1 ರಲ್ಲಿ ಗೊಡೆಯ ಪಕ್ಕದಲ್ಲಿ ಇರುವ ಖಾಲಿ ಜಾಗ ಸದರಿ ವಾದಿಯವರಿಗೆ ಸಂಬಂಕಟ್ಟ ಆಸ್ತಿ ಅದರಲ್ಲಿ ನಾನು ಮೆಟ್ಟಿಲುಗಳನ್ನು ಹಾಕಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೆಟ್ಟಿಲುಗಳು ಕಾನೂನು ಬಾರ್ಹಿರವಾಗಿ ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೆಟ್ಟಿಲುಗಳನ್ನು 2019 ರಲ್ಲಿ ಹಾಕಿರುತ್ತೇವೆ ಆದರೆ ತಿಂಗಳೂ ಮತ್ತು ದಿನಾಂಕ ಹೇಳಲಾಗುವುದಿಲ್ಲ. ದಾವಾ ನಂಬರ 103/2019 ಇದನ್ನು ನಾನು ಹೂಡಿದಾಗ ಆ ಸಮಯದಲ್ಲಿ ಮೆಟ್ಟಿಲುಗಳನ್ನು ಕಟ್ಟುತ್ತಿದ್ದೆನು. ಮೂಲ ದಾವಾ ನಂಬರ 103/2019 ನ್ನು ಹೂಡುವ ಮೋದಲು ಈ ಪ್ರಕರಣದಲ್ಲಿ ದಾವಾ ಸ್ವತ್ತಿನಲ್ಲಿ ಯಾವುದೆ ಕಟ್ಟಡವನ್ನು ಕಟ್ಟಬಾರದು ಎಂದು ಆದೇಶಿಸಲಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆದೇಶವನ್ನು ಉಲ್ಲಂಘನೆ ಮಾಡಿ ಕಟ್ಟಡವನ್ನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳು ಸದರಿ ಮೆಟ್ಟಿಲುಗಳನ್ನು ಕಟ್ಟಬಾರದು ಎಂದು ಹೇಳಿದಾಗ ಅವರ ವಿರುದ್ದ ಜಗಳವನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ಮತ್ತು ನನಗೆ ಸಂಬಂದ ಇರುವುದಿಲ್ಲ ವಾದಿಗಳಿಗೆ ತೋಂದರೆ ನೀಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಾಮಾಣ ಪತ್ರದಲ್ಲಿ ಸುಳ್ಳು ವಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ., ಸಂಡೂರು.